

ರೊಡ್ರಿಗೊ, ಮರ್ಸಿಡಿಸ್, ಮಾರ್ಕ್ವೆಜ್, ಗೊಂಝಾಲೊ

ನನಗೆ ಏನೇನೂ ಮಾಡೋಕಾಗಲ್ಲ, ಹೆಲ್ಪ್ ಮಿ' ಎನ್ನುತ್ತಲೇ ಇರುವನು. ಒಂದೊಂದು ದಿನವಂತೂ ಒಂದು, ಒಂದೂವರೆ ಗಂಟೆ ಇದನ್ನೇ ಹೇಳುತ್ತಾ ಹೇಳುತ್ತಾ ಸೋತು ಸುಮ್ಮನಾಗುವನು. ಹಾಗೂ ಹೀಗೂ ಆ ಗಳಿಗೆ ಕಳೆದುಹೋಗುವುದು. ಆಮೇಲೆ ಒಂಚೂರು ಪ್ರಶಾಂತವಾಗುತ್ತಾ ಹೇಳುವನು: 'ನೆನಪು ಹೊರಟೋಗ್ತಾ ಇದೆ; ನನ್ನ ಅದೃಷ್ಟ ಅಂದ್ರೆ ನೆನಪಿನ ಶಕ್ತಿ ಹೋಗ್ತಾ ಇದೆ ಅನ್ನೋದೂ ಮರೆತು ಹೋಗ್ತಾ ಇದೆ.' ಒಂದೊಂದು ಸಲ, 'ಈಗ ನನ್ನ ಎಲ್ಲಾರೂ ಮಗೂ ಥರಾ ನೋಡ್ತಾ ಇದಾರೆ. ಇದೂ ನನಗೆ ಇಷ್ಟ ಆಗ್ತಾ ಇದೆ ಅನ್ನೋದೇ ಒಂದು ಖುಷಿ' ಎನ್ನುವನು.

ನೆನಪು ಕಂತತೊಡಗಿದ ಕಾದಂಬರಿಕಾರನ ಎದುರು ಮನೆಯವರು ಅವನು ಆವರೆಗೆ ಬರೆದ ಪುಸ್ತಕಗಳನ್ನು ತಂದಿಡುವರು. ಹೀಗಾದರೂ ನೆನಪು ವಾಪಸ್ ಬರಲಿ ಎಂಬುದು ಅವರ ಆಸೆ. ಪುಸ್ತಕಗಳನ್ನೆಲ್ಲ ನೋಡಿ ಮಾರ್ಕ್ವೆಜ್ ಇವನ್ನೆಲ್ಲ ಎಲ್ಲೋ ನೋಡಿರುವೆನೆಂಬಂತೆ ಕಣ್ಣರಳಿಸುವನು. ಹಿಂದೆಲ್ಲ, 'ಎಲ್ಲಿ ಏನು ತಪ್ಪಿರುತ್ತೋ, ನಾನು ಬರೆದಿದ್ದನ್ನೆಲ್ಲ ಈಗ ಮತ್ತೆ ಓದಿದರೆ ಎಲ್ಲಿ ನನ್ನ ಕ್ರಿಯೇಟಿವಿಟಿಗೆ ಹೊಡೆತ ಬೀಳುತ್ತೋ' ಎಂಬ ದಿಗಿಲಿನಲ್ಲಿ ಮಾರ್ಕ್ವೆಜ್ ಎಂದೂ ಮತ್ತೆ ತನ್ನ ಪುಸ್ತಕಗಳನ್ನು ಓದಿದವನಲ್ಲ. ಈಗ ಅಲ್ಲಲ್ಲಿ ಓದಲೆತ್ನಿಸಿ, 'ಅರೆರೆ! ಇದೆಲ್ಲ ಎಲ್ಲಿಂದ ಬಂತಪ್ಪಾ?' ಎಂದು ಅಚ್ಚರಿಯಿಂದ ಮಗನನ್ನು ಕೇಳುವನು. ಆ ಪುಸ್ತಕದಲ್ಲಿರುವ ಏನೊಂದೂ ತಿಳಿಯುತ್ತಿಲ್ಲ. ಪುಸ್ತಕ ಮುಚ್ಚಿ, ಹಿಂಬದಿಯ ಕವರ್ ಮೇಲೆ ತನ್ನ ಫೋಟೊ ನೋಡಿ ವಿಸ್ಮಯಗೊಳ್ಳುವನು. ಮತ್ತೆ ಪುಸ್ತಕ ತೆರೆದು ಓದಲೆತ್ನಿಸುವನು.

ಮಂಕಾಗಿ ಮುದುಡಿದ್ದ ಮಾರ್ಕ್ವೆಜ್ ಒಮ್ಮೊಮ್ಮೆ ಸ್ಪ್ಯಾನಿಶ್ ಸಾಹಿತ್ಯದ ಸುವರ್ಣಯುಗದ ಎಷ್ಟೋ ಕವಿತೆಗಳನ್ನು ನೆನಸಿಕೊಂಡು ಹೇಳತೊಡಗುವನು. ಅಂಥ ಹಲವಾರು ಕವಿತೆಗಳು ಅವನಿಗೆ ಬಾಯಿಪಾಠವಾಗಿದ್ದವು. ಹಿಂದೊಮ್ಮೆ ಅವನು ಸುದೀರ್ಘ ಸ್ಕ್ಯಾನಿಂಗಿನ ಭಯದಿಂದ ಪಾರಾಗಲು ಆ ಇಡೀ ನಲವತ್ತೈದು ನಿಮಿಷ ನೆನಪಿನಿಂದ ಕವಿತೆಗಳನ್ನು ಹೇಳುತ್ತಲೇ ಇದ್ದ ಗಳಿಗೆ ಮನೆಯವರಿಗೆ ಈಗ ನೆನಪಾಗುವುದು. ಅವನಿಗೆ ಪ್ರಿಯವಾದ ಸಂಗೀತ ಹಾಕುವರು. ಮಾರ್ಕ್ವೆಜ್ ಕಣ್ಣರಳುವುದು. ಹಿಂದೆಲ್ಲ ರೊಮ್ಯಾಂಟಿಕ್ ಹಾಡುಗಳೆಂದರೆ ಅವನಿಗೆ ಪ್ರಾಣ. ಆ ಹಾಡುಗಳ ಸೆಂಟಿಮೆಂಟ್ಯಾಲಿಟಿ ಅವನಿಗೆ ಇಷ್ಟ. ಅದು ಹೇಗೆ ಇಷ್ಟು ಪುಟ್ಟ ರಚನೆಯಲ್ಲಿ ಈ 'ಹಾಡುಕವಿ'ಗಳು ಇಂಥ ರಮ್ಯ ಭಾವ ಉಕ್ಕಿಸಬಲ್ಲರು ಎಂದು ಬೆರಗಾಗುತ್ತಿದ್ದ. 'ಲವ್ ಇನ್ ದಿ ಟೈಮ್ ಆಫ್ ಕಾಲರಾ' ಬರೆಯುತ್ತಿದ್ದಾಗ ಆ ರೊಮ್ಯಾಂಟಿಕ್ ಹಾಡುಗಳನ್ನು ಮತ್ತೆ ಮತ್ತೆ ಕೇಳಿಸಿಕೊಂಡು ಅವುಗಳ ಭಾವುಕತೆ, ಭಾವತೀವ್ರತೆಯ ಉಕ್ಕು, ಅದರ ಪರಿಣಾಮ ಇವನ್ನೆಲ್ಲ ಸ್ಟಡಿ ಮಾಡುತ್ತಿದ್ದ. ಈಗ